ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೧೦ನೇ ಮಾರ್ಚ್ ೧೯೮೭/ ಫಾಲ್ಗುಣ ೧೯, ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧–೦೩ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಶ್ರೀ ರಾಜೂಗೌಡರವರ ಪ್ರಶ್ನಾ ಸಂಖ್ಯೆ ೩೨೯ (೩೮೨)ನ್ನು ಮುಂದೂಡಲಾಗಿದೆ.

ಉಪ-ಆರಕ್ಷಕ ನಿರೀಕ್ಷಕರಿಂದ ನಾಗರೀಕನೊಬ್ಬನಿಗೆ ಅಕ್ರಮ ಕಿರುಕುಳ

೮೫೮. ಶ್ರೀ ಎಂ ವರದೇಗೌಡ (ಚನ್ನಪಟ್ಟಣ).— ಮಾನ್ಯ ಗೃಹಸಚಿವರು **ಈ ಕೆಳಕಂಡ ಪ್ರಶ್ನೆಗಳಿಗೆ** ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೨೬–೭–೧೯೮೬ರಂದು ರಾಜಾಜಿನಗರದ ಸಬ್‌ಇನ್ಸ್‌ಪೆಕ್ಟರ್ **ಸಂಗ್ರಾಮಸಿಂಗ್** ಎಂಬುವರು **ಶ್ರೀ ವೆಂಕಟರಾಮಯ್ಯ**, ರಾಜಾಜಿನಗರದ ನಾಗರೀಕನನ್ನು **ಅಕ್ರಮವಾಗಿ ಥಳಿಸಿದ್ದು ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಸಿ. ಒ. ಡಿ. ವಂತ್ರು ಬೆಂಗಳೂರು ವಿಭಾಗಾಧಿಕಾರಿಗಳಿಂದ ನಿಷ್ಪಕ್ಷಪಾತ ತನಿಖೆಗೆ ಆಜ್ಞಾಪಿಸಿದ್ದು** ನಿಜವೇ ?

ಆ) ಹಾಗಿದ್ದಲ್ಲಿ ಮೇಲಿನ ಎರಡು ತನಿಖೆಗಳಿಂದ ಹೊರಬಿದ್ದ ಅಂಶವೇನು ?

ಇ) ತನಿಖಾ ವರದಿಯಿಂದ ಕೈಗೊಂಡ ಕ್ರಮವೇನು ?

ಶ್ರೀ ಬಿ ರಾಚಯ್ಯ (ಗೃಹಸಚಿವರು).—

ಅ) ಹೌದು.

ಆ) ದುರ್ವರ್ತನೆಯಿಂದ ನಡೆದುಕೊಂಡಿರುವುದಾಗಿ ಕಂಡು ಬಂದಿದೆ.

ಇ) ಶ್ರೀ ಟಿ ಜಿ ಸಂಗ್ರಾಮಸಿಂಗ್‌ರವರನ್ನು ಆಮಾನತ್ತಿನಲ್ಲಿಟ್ಟು ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಹಾಗೂ ಕರ್ನಾಟಕ ಪೋಲೀಸು ಕಾಯಿದೆ ೧೯೬೫ರ ಕಲಂ ೧೭೦ ರಲ್ಲಿ ಪ್ರಾಸಿಕ್ಯೂಷನ್ ಮಾಡುವುದಕ್ಕೆ ಮಂಜೂರಾತಿ ನೀಡಲಾಯಿತು. **೧೭–೫–೧೯೮೫** ರಂದು **ಆರೋಪಿಯ ಮೇಲೆ ದೋಷಾರೋಪಣ** ಪತ್ರವನ್ನು ಬೆಂಗಳೂರು ನಗರದ **ಮೊದಲನೆ** ಅಡಿಷನಲ್ **ಸಿಟಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್** ಅವರ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ.

ಶ್ರೀ ಎ. ವರದೇಗೌಡ.—ಮಾನ್ಯ ಅಧ್ಯಕ್ಷರೇ, **ಈ ತನಿಖೆಯಿಂದ** ಆತನಂ ನ್ಯಾಯಾಲಯದಲ್ಲಿ ಆರೋಪಿಯಾಗಿದ್ದರೂ ಕೂಡ ಆತನನ್ನು ಇದುವರೆಗೆ ಏತಕ್ಕೆ ಅಮಾನತ್‌ನಲ್ಲಿಡಲಿಲ್ಲ ?

ಶ್ರೀ ಬಿ. ರಾಚಯ್ಯ(ಗೃಹಮಂತ್ರಿಗಳು).—ಆ ವಿಚಾರ ಕೋರ್ಟಿಗೆ ಹೋದಮೇಲೆ ಸ್ಟೇ ಆರ್ಡರ್ ಬಂದಿದೆ. ಸ್ಟೇ ಆರ್ಡರ್ ಬಂದಮೇಲೆ ನಾವು ಅವನನ್ನು ಮಾನತ್‌ನಲ್ಲಿಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ೧೯–೧–೧೯೮೫ರಲ್ಲಿ ಈ ಬಗ್ಗೆ ಆದೇಶ ಬಂದಮೇಲೆ ಅವನನ್ನು ಸಸ್ಪೆಂಡ್ ಮಾಡಬೇಕು ಎಂದು ಆದೇಶನೀಡುತ್ತೇವೆ.

ಅಧ್ಯಕ್ಷರು.— ಶ್ರೀ ಶಿವಶೇಖರಪ್ಪಗೌಡ ಅವರ ಪರವಾಗಿ ಶ್ರೀ ವೀರಯ್ಯ ಸ್ವಾಮಿ ಅವರು ಪ್ರಶ್ನೆಯನ್ನು ಕೇಳಬಹುದು

ಶಹಾಪುರ ಪಟ್ಟಣಕ್ಕಾಗಿ ೩೦ ಹಾಸಿಗೆಗಳ ಆಸ್ಪತ್ರೆ

೧೧೪೧. ಶ್ರೀ ಶಿವಶೇಖರಪ್ಪ ಗೌಡ(ಶಹಾಪುರ).—ಮಾನ್ಯ ಆರೋಗ್ಯ ಹಾಗೂ ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ಪಟ್ಟಣಕ್ಕೆ ೩೦ ಹಾಸಿಗೆಗಳ ಆಸ್ಪತ್ರೆ ಮಂಜೂರು ಆದ ಬಗ್ಗೆ ಸರ್ಕಾರದವರ ಗಮನದಲ್ಲಿದೆಯೇ ?

ಆ) ಒಳರೋಗಿಗಳ ಸಂಖ್ಯೆ ದಿನೇ ದಿನೇ ಜಾಸ್ತಿ ಆಗುತ್ತಿದ್ದು ಆಸ್ಪತ್ರೆಗೆ ಸೇರಿಕೊಳ್ಳುವ ರೋಗಿಗಳಿಗೆ ಯೋಗ್ಯ ಸ್ಥಳಾವಕಾಶವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸದರಿ ಆಸ್ಪತ್ರೆಗೆ ಯೋಗ್ಯ ಕಟ್ಟಡ ಹಾಗೂ ಸಿಬ್ಬಂದಿಯನ್ನು ಸರ್ಕಾರದವರು ಯಾವಾಗ ಒದಗಿಸುವರು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಆಬ್ಕಾರಿ ಮಂತ್ರಿಗಳು).—

ಅ) ೨೫ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ವೇಲ್ಫರ್ಜ್‌ಗೇರಿಸಲಾಗಿದೆ.

ಆ) ಬಂದಿದೆ.

ಇ) ಯೋಜನೆಯಡಿಯಲ್ಲಿ ಸಾಕಷ್ಟು ಹಣ ದೊರೆತಾಗ ಪರಿಶೀಲಿಸಲಾಗುವುದು

ಶ್ರೀ ವೀರಯ್ಯಸ್ವಾಮಿ. —ಮಾನ್ಯ ಅಧ್ಯಕ್ಷರೆ, ಶಹಾಪುರ ಪಟ್ಟಣ ೨೫ ಸಾವಿರ ಜನಸಂಖ್ಯೆ ಇದು ಸುಮಾರು ೧೦೦ ಹಳ್ಳಿಗಳು ಆ ತಾಲ್ಲೂಕಿಗೆ ಬರುತ್ತದೆ ಅನುವುದನ್ನು ಗಮನಿಸಿಕೊಂಡು ಆ ಆಸ್ಪತ್ರೆಯನ್ನು ದೊಡ್ಡದನ್ನಾಗಿ ಮಾಡಿ, ೩೦ ಹಾಸಿಗೆಗಳಿಗೆ ಹೆಚ್ಚಿಸಲು ಸರ್ಕಾರ ತೀರ್ಮಾನ ಮಾಡಿದೆ. ಮಾನ್ಯ ಸಚಿವರು ಹೇಳಿದ ಪ್ರಕಾರ ಅಲ್ಲಿ ಒಳರೋಗಿಗಳಿಗೆ ಯೋಗ್ಯ ಸ್ಥಳಾವಕಾಶ ಇಲ್ಲ. ಹೀಗಿದ್ದರೂ ಕೂಡ ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಯೋಜನೆಯಲ್ಲಿ ಸಾಕಷ್ಟು ಹಣ ದೊರೆತಾಗ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಹಾಗೆ ಹಣ ಇಲ್ಲ ಅಂದಾಗ ಇಲ್ಲಿ ೩೦ ಹಾಸಿಗೆಗಳನ್ನು ಮಾಡುತ್ತೇವೆ ಅಂತ ಏತಕ್ಕೆ ಹೇಳಬೇಕಾಗಿತ್ತು ? ಜಾಸ್ತಿ ಹಾಸಿಗೆಗಳನ್ನು ಕೊಡುತ್ತೇವೆ ಅಂತ ಹೇಳಬಾರದಾಗಿತ್ತು ?

ಶ್ರೀ ಹೆಚ್ ಟಿ ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಸರ್ಕಾರ ಈಗಾಗಲೇ ತೀರ್ಮಾನ ತೆಗೆದು ಕೊಂಡಿರುವ ಪ್ರಕಾರ ಎಲ್ಲಾ ತಾಲ್ಲೂಕುಗಳಿಗೂ ಆಲ್ಲಿರುವ ಆಸ್ಪತ್ರೆಗಳನ್ನು ೩೦ ಮತ್ತು ೫೦ ಹಾಸಿಗೆ ಗಳನ್ನಾಗಿ ಪರಿವರ್ತನೆ ಮಾಡಲಾಗುವುದು ಆ ತೀರ್ಮಾನದ ಪ್ರಕಾರ ಳಿಷ ತಾಲ್ಲೂಕುಗಳಲ್ಲಿ ಇನ್ನೂ ಈ ಕೆಲಸ ಆಗಬೇಕಾಗಿದೆ. ಶಹಾಪುರ್ ಆಸ್ಪತ್ರೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ೧೯೭೧ನೇ ಇಸವಿಯಲ್ಲಿ ೨೫ ಹಾಸಿಗೆಗಳು ಇದ್ದ ಆಸ್ಪತ್ರೆಯನ್ನು ವೇಲ್ಫರ್ಜ್‌ಗೆ ಪರಿವರ್ತನೆ ಮಾಡಲಾಯಿತು. ಆವಾಗ ಆವರ್ತ ಮತ್ತು ಅನಾವರ್ತ ಖರ್ಚಿಗಾಗಿ ಆ ಆಸ್ಪತ್ರೆಗೆ ಶೇಕಡ ೨೫ ಭಾಗವನ್ನು ಪುರಸಭೆಯವರು ತುಂಬಿಕೊಡುತ್ತೇವೆಂದು ಇನ್ನು ಶೇಕಡಾ ೨೫ ಭಾಗವನ್ನು ತಾಲ್ಲೂಕು ಬೋರ್ಡಿನವರು ತುಂಬಿ ಕೊಡುತ್ತೇವೆಂದು ಹೇಳಿದ ಪ್ರಕಾರ ಆ ಒಂದು ಪರತ್ತಿನ ಮೇಲೆ ಆದನ್ನು ವೆಲ್ಫರ್ಜ್‌ಗೆ ಏರಿಸಲು ಆಜ್ಞೆ ಹೊರಡಿಸಿದರು. ಈ ಬಗ್ಗೆ ನಾವು ಅನೇಕ ಅಧಿಕೃತ ಜ್ಞಾಪನಾಪತ್ರಗಳನ್ನು ಬರೆದಾಗಿದೆ ; ಆದರೂ ಕೂಡ ಅವರು ಹಣ ತುಂಬಿಕೊಡಲಿಲ್ಲ.

ಶ್ರೀ ವೀರಯ್ಯಸ್ವಾಮಿ.—ನೀವು ಈ ಸಿಬ್ಬಂದಿಯವರಿಗೆ ಬೇಕಾದಷ್ಟು ಹಣ ಖರ್ಚು ಮಾಡು ತ್ತಿದ್ದೀರಿ ಆದುದರಿಂದ ಇದಕ್ಕೆ ವಿನಾಯಿತಿ ತೋರಿಸಿ ನೀವೇ ಹಣವನ್ನು ತುಂಬಿ ಏತಕ್ಕೆ ಈ ಕೆಲಸ ಮಾಡಬಾರದು.

ಶ್ರೀ ಹೆಚ್ ಟಿ ಕೃಷ್ಣಪ್ಪ.—ಆಗಿನ ಪರಿಸ್ಥಿತಿ ಹಾಗೆ ಇತ್ತು. ಸರ್ಕಾರೀ ಆಜ್ಞೆಯನ್ನು ಬದಲಾಯಿಸಿಕೊಂಡು ಆ ರೀತಿಯಾಗಿ ವಿನಾಯಿತಿ ಕೊಡಲಿಕ್ಕೆ ಬರುವುದಿಲ್ಲ.